# ಭೀಮ ಪತ್ರಿಕೆ

ಸಂಚಿಕೆ : ಅಗಸ್ಟ್ 2021

## 75ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು!

## ನಿಮಗೆ ಗೊತ್ತಿದೆಯಾ?


- ಈ ವರ್ಷ ಭಾರತವು ತನ್ನ 75ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಿಕೊಳ್ಳುತ್ತಿದೆ.
- ನಮ್ಮ ರಾಷ್ಟ್ರಧ್ವಜವನ್ನು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಆಂಧ್ರ ಪ್ರದೇಶ ಪಿಂಗಳಿ ವೆಂಕಯ್ಯನವರು ವಿನ್ಯಾಸಗೊಳಿಸಿದ್ದಾರೆ.
- ಅವರ ಈ ವಿನ್ಯಾಸವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 1947ರ ಜುಲೈ 22ರಂದು ಅಂಗೀಕರಿಸಿತು.
- ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಯುವಜನರು ಮಹತ್ವದ ಪಾತ್ರವನ್ನು ವಹಿಸಿದ್ದರು.
- ಕ್ವಿಟ್ ಇಂಡಿಯಾ (ಭಾರತ ಬಿಟ್ಟು ತೊಲಗಿ) ಚಳುವಳಿಯ ಸಮಯದಲ್ಲಿ ಗಾಂಧೀಜಿಯವರು, ಶಾಲೆ-ಕಾಲೇಜುಗಳನ್ನು ಬಹಿಷ್ಕರಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದಾಗ, ವಿದ್ಯಾರ್ಥಿಗಳು ದೇಶಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ - ಕಾಲೇಜುಗಳನ್ನು ಬಹಿಷ್ಕರಿಸಿದರು.

- 1920ರಲ್ಲಿ ಲಾಲಾ ಲಜಪತ್ ರಾಯ್‌ರವರ ಅಧ್ಯಕ್ಷತೆಯಲ್ಲಿ ಮೊದಲ 'ಅಖಿಲ ಭಾರತ ವಿದ್ಯಾರ್ಥಿಗಳ' ಸಮ್ಮೇಳನವು ನಾಗ್ಪುರದಲ್ಲಿ ನಡೆಯಿತು.
- ಭಾರತೀಯ ಕಾಂಗ್ರೆಸ್‌ನ ಹೋರಾಟಗಳನ್ನು ಬೆಂಬಲಿಸುವ ಸಲುವಾಗಿ 1936ರಲ್ಲಿ, ಭಾರತದ ಮೊದಲ ವಿದ್ಯಾರ್ಥಿ ಸಂಘಟನೆಯಾದ 'ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟ'ವು ಹುಟ್ಟಿತು.

# ನಮ್ಮ ಸುತ್ತ-ಮುತ್ತಲಿನ ಸುದ್ದಿ:

ಕರ್ನಾಟಕ ಸರ್ಕಾರವು ಕೋವಿಡ್ 3ನೇ ಅಲೆಯ ಮುಂಚಿತವಾಗಿ ರಾಜ್ಯದ 1.5 ಕೋಟಿ ಮಕ್ಕಳ ಆರೋಗ್ಯದ ವಿವಿಧ ಅಂಶಗಳನ್ನು ಪರೀಕ್ಷಿಸಲು ರಾಜ್ಯಾದ್ಯಂತ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ತಪಾಸಣೆ ನಡೆಸುವುದಾಗಿ ಘೋಷಿಸಿದೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಕೆ. ಸುಧಾಕರ್‌ರವರ ಪ್ರಕಾರ 'ಆರೋಗ್ಯ ನಂದನ' ಕಾರ್ಯಕ್ರಮವನ್ನು ಅಗಸ್ಟ್‌ನಲ್ಲಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರು ಆರಂಭಿಸಲಿದ್ದಾರೆ. ಈ ತಪಾಸಣೆಯು ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಿರುವುದನ್ನು, ಇತರ ರೋಗಗಳ ಪತ್ತೆಹಚ್ಚಲು ಸಹಾಯ ಮಾಡುತ್ತದೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಪೌಷ್ಠಿಕ ಆಹಾರ, ಪೂರಕ ವ್ಯವಸ್ಥೆಗಳು, ಅವರ ಆರೋಗ್ಯವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ.

ನಿಮ್ಮ ಪಂಚಾಯತ್‌ಗಳಲ್ಲಿ ಇದು ನಡೆಯುತ್ತಿರುವ ಬಗ್ಗೆ ನಿಮ್ಮ ಅನುಭವ ಮತ್ತು ಎಲ್ಲ ಮಕ್ಕಳು ಈ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆಯೆ ಎನ್ನುವ ಬಗ್ಗೆ ನಮಗೆ ತಿಳಿಸಿ.






# ರಿಗೆ: ಭೀಮ

ಹಾಯ್ ಭೀಮ,

ಪ್ರತಿ ಸಲವೂ ನಿನಗೆ ಬೇರೆ ಬೇರೆಯವರು ಪತ್ರ ಬರೀತಾರೆ, ನಾವೂ ಓದಿ ಖುಷಿಪಟ್ಟಿದ್ದೀವಿ, ಪುಣ್ಯಕೋಟಿ ಮಕ್ಕಳ ಸಂಘದಿಂದ ನಾವು ಮಾಡಿದ ಒಂದು ವಿಷಯ ಹೇಳ್ಬೇಕಂತ ಪತ್ರ ಬರಿತಿದ್ದೀವಿ.

ನಮ್ಮ ಪುಣ್ಯಕೋಟಿ ಸಂಘದಲ್ಲಿರುವ 18 ಮಕ್ಕಳು ಸೇರಿ ಕೊರೊನಾ ಲಾಕ್ಡೌನ್ ನಂತರ ಸಾಮಾಜಿಕ ಅಂತರದಲ್ಲಿ ಸಭೆ ಸೇರಿ 2 ಚಟುವಟಿಕೆ ಮಾಡಲು ಆಲೋಚನೆ ಮಾಡಿದ್ವಿ.
ಇದಕ್ಕೆ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ (ಸಿಡಬ್ಲ್ಯೂಸಿ) ಸಂಸ್ಥೆಯವರು ಸಹಕಾರ ಮಾಡಿದ್ರು. ನಮ್ಮ ಊರಿನ ಸುತ್ತ ನಡೆದಾಟ ಮಾಡಿದೆವು, ಮಳೆಗಾಲವಾದ್ದರಿದಂದ ನೀರು ತುಂಬಿಕೊಂಡಿರುವ ರಸ್ತೆಯ ಪಕ್ಕದ ಕೆರೆಗಳು, ಮದಗ, ನೀರಿನ ಹೊಂಡಗಳು ಅಪಾಯಕಾರಿಯಾಗಿದ್ದವು. ಕಸದ ರಾಶಿ ಹಾಕುತ್ತಿರುವ, ಬೀದಿದೀಪ ಇಲ್ಲದ - ಮುಂತಾದ ಸ್ಥಳಗಳನ್ನು ಗುರುತು ಹಾಕಿಕೊಂಡೆವು. ಅಗತ್ಯವಿರುವುದರ ಫೋಟೊ ತೆಗೆದುಕೊಂಡು, ಇದರ ಆಧಾರದಲ್ಲಿ ಹಾಗೂ ಗೂಗಲ್ ಮ್ಯಾಪಿನ ಸಹಾಯದಿಂದ ಸಂಘದವರೆಲ್ಲ ಸೇರಿ, ನಮ್ಮ ಊರಿನ

ನಕ್ಷೆ ಮಾಡಿ, ಅದರಲ್ಲಿ ಮೇಲೆ ಹೇಳಿದ ಪ್ರಮುಖ ಸ್ಥಳಗಳನ್ನು ಗುರುತಿಸಿ ಬಣ್ಣಗಳನ್ನು ತುಂಬಿ ಸುಂದರವಾದ ನಕ್ಷೆ ಮಾಡಿದೆವು.



ಊರಿನಲ್ಲಿರುವ ಸುಮಾರು 60% ಗಿಂತ ಹೆಚ್ಚಿನ ಮನೆಗಳನ್ನು ಭೇಟಿ ಮಾಡಿ, ಮನೆಯಲ್ಲಿ ಎಷ್ಟು ಜನರಿದ್ದಾರೆ, ಮಕ್ಕಳೆಷ್ಟು, ಯಾರು ಲಸಿಕೆ ಪಡೆದಿದ್ದಾರೆ, ಯಾರು ಪಡೆದಿಲ್ಲ ಎನ್ನುವುದನ್ನು ದಾಖಲು ಮಾಡಿಕೊಂಡೆವು. ಚಾಲಕರು, ಕ್ಷೌರಿಕರು, ಮನೆ ಕೆಲಸದವರು ಮುಂತಾದವರಿಗೆ ಸರ್ಕಾರ ಘೋಷಿಸಿದ ಯೋಜನೆಗಳ ಮಾಹಿತಿ ತಿಳಿಸಿ ಅರ್ಜಿ ಸಲ್ಲಿಸುವಂತೆ ಹೇಳಿದೆವು.

ನಾವು ಒಂದಿನ ಮಕ್ಕಳ ಮಿತ್ರರು & ಸಿ.ಡಬ್ಲ್ಯೂ.ಸಿ.ಯವರೊಡನೆ ಪಂಚಾಯತ್‌ಗೆ ಹೋಗಿ ಊರಿನ ನಕ್ಷೆ ಮತ್ತು ಮನೆ ಸಮೀಕ್ಷೆಯ ಮಾಹಿತಿಗಳನ್ನು ಅಧ್ಯಕ್ಷರು, ಸದಸ್ಯರು, ಪಿ.ಡಿ.ಓ. ಇತರರೊಂದಿಗೆ ವಿವರವಾಗಿ ಹಂಚಿಕೊಂಡೆವು. ಪರಿಹಾರ ಹಾಗೂ ಸಮೀಕ್ಷೆಯ ಮಾಹಿತಿಯನುಸಾರ ಅಗತ್ಯ ಕ್ರಮಕೈಗೊಳ್ಳಲು ಒತ್ತಾಯಿಸಲಾಯಿತು. ಪಂಚಾಯತ್‌ನವರು ಈ ಮಾಹಿತಿಗಳನ್ನು ನೋಡಿ ಖುಷಿಪಟ್ಟರು ಮತ್ತು ಕ್ರಮಕೈಗೊಳ್ಳುವುದಾಗಿ ಹೇಳಿದರು.

ಕೊರೋನ ಕಾರಣದಿಂದ ನಮಗೆ ಮನೆಯಲ್ಲಿಯೇ ಇದ್ದು ಸಾಕಾಗಿ ಹೋಗಿತ್ತು. ನಮ್ಮ ಸಂಘದವರೆಲ್ಲರೂ 5 ಜನರ ಗುಂಪು ಮಾಡಿಕೊಂಡು, ಮಾಸ್ಕ್ ಹಾಕಿಕೊಂಡು, ಊರಲ್ಲಿ ನಡೆದಾಟ ಮಾಡಿದ್ದು, ಜನರೊಂದಿಗೆ ಮಾತನಾಡಿದ್ದು ಖುಷಿಯಾಯ್ತು, ಊರಿನ ಪರಿಚಯ ಆಯ್ತು. ಊರಿನವರಿಗೆ ನಮ್ಮ ಸಂಘದ ಬಗ್ಗೆ ಗೊತ್ತಾಯ್ತು. ಜನರೊಂದಿಗೆ ಮಾತನಾಡುವುದು, ವಿಷಯ ಸಂಗ್ರಹಿಸುವುದು, ಅದನ್ನು ಒಟ್ಟು ಮಾಡಿದ್ದು, ಊರಿನ ನಕ್ಷೆ ತಯಾರಿಸಿದ್ದು, ಪಂಚಾಯತ್ ಎದುರಿಗೆ ಹಂಚಿಕೊಂಡಿರುವುದು ನಮಗೆ ವಿಶೇಷ ಕಲಿಕೆಯಾಯಿತು.

ನಮ್ಮ ವಿಷಯವನ್ನು ವಿಶಿಷ್ಟವಾಗಿ ಪಂಚಾಯತ್ ಎದುರಿಗೆ ಇಟ್ಟಿರುವ ಹಾಗೂ ನಮ್ಮಿಂದ ಊರಿಗೆ ಸಹಾಯವಾಗುವಂತೆ ಕೆಲಸ ಮಾಡಿರುವ ಹೆಮ್ಮೆ ಇದೆ.

ಇಂತಿ,

ಪುಣ್ಯಕೋಟಿ ಸಂಘದ ಮಕ್ಕಳು, ಕೋಳ್ಕೆರೆ, ಬಸ್ರೂರು, ಕುಂದಾಪುರ

# ಮಕ್ಕಳೇ ನಿಮಗೆ ಸಹಕಾರಿಯಾಗಬಲ್ಲ ಯೋಜನೆಗಳು:

ಕೊರೊನಾದ ಒಂದನೇ ಅಲೆ ಮತ್ತು ಎರಡನೇ ಅಲೆಯಿಂದ ಸಂಕಷ್ಟಕ್ಕೊಳಗಾದ ಮಕ್ಕಳಿಗೆ ಮತ್ತು ಕುಟುಂಬಕ್ಕೆ ಸಾಂತ್ವನ ಮತ್ತು ಆರ್ಥಿಕ ನೆರವು ನೀಡುವ ಉದ್ದೇಶದಿಂದ ಸರ್ಕಾರ ವಿವಿಧ ರೀತಿಯ ಸಹಾಯಧನದ ಯೋಜನೆಗಳನ್ನು ಜಾರಿಗೆ ತಂದಿದೆ.

## 1. ಬಾಲಸೇವಾ ಯೋಜನೆ

* **ಮಕ್ಕಳಿಗೆ ತಿಂಗಳಿಗೆ ₹3,500/- ಸಹಾಯಧನ**

ಕೋವಿಡ್‌ನಿಂದ **ಪೋಷಕರಿಬ್ಬರನ್ನೂ** ಕಳೆದುಕೊಂಡಿರುವ ವಿಸ್ತೃತ ಕುಟುಂಬದ ಸದಸ್ಯರ ಆರೈಕೆಯಲ್ಲಿರುವ ಮಕ್ಕಳಿಗೆ. - 3 ವರ್ಷಗಳವರೆಗೆ.

* **ಲ್ಯಾಪ್‌ಟಾಪ್ ಅಥವಾ ಟ್ಯಾಬ್ ವಿತರಣೆ**

ಪೋಷಕರಿಬ್ಬರನ್ನೂ ಕಳೆದುಕೊಂಡ **SSLC** (10ನೇ ತರಗತಿ) ಪೂರೈಸಿದವರಿಗೆ.

* **ತಲಾ ₹1 ಲಕ್ಷ ರೂಪಾಯಿ ಆರ್ಥಿಕ ಧನಸಹಾಯ**

ಕೋವಿಡ್ 19ರ ಕಾರಣದಿಂದ **ಪೋಷಕರಿಬ್ಬರನ್ನೂ** ಕಳೆದುಕೊಂಡ ಹೆಣ್ಣುಮಕ್ಕಳಿಗೆ - 21 ವರ್ಷ ತುಂಬಿದ ನಂತರ ಸಿಗುವ ಸಹಾಯಧನ. ವಿವಾಹ, ಉನ್ನತ ಶಿಕ್ಷಣ ಮತ್ತು ಸ್ವಯಂ ಉದ್ಯೋಗಕ್ಕೆ.

## 2. ಪ್ರಾಯೋಜಿತ ಕಾರ್ಯಕ್ರಮ

**₹1,000/- ಆರ್ಥಿಕ ಸಹಾಯಧನ**

**ಯಾವುದೇ ಕಾರಣಕ್ಕೆ ಒಬ್ಬರು ಪೋಷಕರನ್ನು** ಕಳೆದುಕೊಂಡ ಮಗುವಿಗೆ ಪ್ರತಿ ತಿಂಗಳು ₹1,000/- ಮೂರು ವರ್ಷಗಳವರೆಗೆ .

## 3. ಬಿಪಿಎಲ್ ಕುಟುಂಬಕ್ಕೆ ₹1 ಲಕ್ಷ ಆರ್ಥಿಕ ನೆರವು

ಕೋವಿಡ್‌ನಿಂದ ದುಡಿಯುವ ಸದಸ್ಯರನ್ನು ಕಳೆದುಕೊಂಡ ಬಿಪಿಎಲ್ ಕುಟುಂಬಕ್ಕೆ ಮಾತ್ರ.

## 4. ಮಧ್ಯಾಹ್ನದ ಬಿಸಿಯೂಟದ ಪಡಿತರ ವಿತರಣೆ

ಶಾಲೆಗೆ ಹೋಗುವ ಮಕ್ಕಳಿಗೆ ಅನ್ವಯ. ಪಡಿತರ ವಿತರಣೆ, ಬಿಸಿಯೂಟ ತಯಾರಿಕೆಗೆ ತಗುಲುವ ವೆಚ್ಚವನ್ನು ಮಕ್ಕಳ ಖಾತೆಗಳಿಗೆ ಪಾವತಿ ಮಾಡುವುದು (2 ತಿಂಗಳಿಗೆ).

## 5. ಅಂಗನವಾಡಿಯ ಸೌಲಭ್ಯಗಳು

ಅಂಗನವಾಡಿಗೆ ದಾಖಲಾದ ಮಕ್ಕಳಿಗೆ, ಗರ್ಭಿಣಿ, ಬಾಣಂತಿ, ಕಿಶೋರಿಯರಿಗೆ.

## 6. ಪಡಿತರ ಕಾರ್ಡ್ ಇರುವ ಕುಟುಂಬಗಳಿಗೆ ತಿಂಗಳ ಪಡಿತರ

ಕಾರ್ಡಿನ ಅನುಸಾರ ಪಡಿತರ.

## ಈ ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ ಬೇಕಾಗುವ ಸಾಮಾನ್ಯ ದಾಖಲೆಗಳು:

* ಸಂಬಂಧಪಟ್ಟವರ ಆಧಾರ್ ಕಾರ್ಡ್
* ಕುಟುಂಬದ ಪಡಿತರ ಕಾರ್ಡ್
* ಮೃತ ವ್ಯಕ್ತಿಯ ಮರಣ ದಾಖಲಾತಿ
* ಸಹಾಯಧನ ಪಡೆಯಲು ಬ್ಯಾಂಕ್ ಪಾಸ್ ಪುಸ್ತಕ
* 10ನೇ ತರಗತಿ ಪಾಸಾದ ಬಗ್ಗೆ ಮಾರ್ಕ್ಸ್ ಕಾರ್ಡ್ (ಲ್ಯಾಪ್‌ಟಾಪ್ & ಟ್ಯಾಬ್)
* ಯೋಜನೆಯನುಸಾರ ನಿಗದಿಪಡಿಸಿದ ದಾಖಲಾತಿಗಳು

**ನೇರ ಸಂಪರ್ಕ:**

ಗ್ರಾಮ ಪಂಚಾಯತ್ ಅಥವಾ ಮಕ್ಕಳ ರಕ್ಷಣಾ ಘಟಕ, ಕಂದಾಯ ಇಲಾಖೆ, ಶಾಲೆ ಮತ್ತು ಅಂಗನವಾಡಿಗಳು.

# ತಂತ್ರಜ್ಞಾನ

ಆನ್‌ಲೈನ್ ಕ್ಲಾಸ್‌ಗಳಿಗಾಗಿ ನೀವು ಮೊಬೈಲ್ ಫೋನ್, ಕಂಪ್ಯೂಟರ್, ಟ್ಯಾಬ್‌ಗಳನ್ನು ಬಳಸುತ್ತಿದ್ದೀರಾ? ನೀವು ಅದನ್ನು ಬೇರೆ ಯಾವುದಕ್ಕೆಲ್ಲ ಬಳಸುತ್ತಿದೀರಿ? ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ ಮತ್ತು ಆಕರ್ಷಕವಾದ ಡಿಜಿಟಲ್ ಪ್ರಪಂಚದ ಬಗ್ಗೆ ತಿಳಿಯಿರಿ. ನಿಮ್ಮ ಅತ್ಯಂತ ಆಸಕ್ತಿದಾಯಕ ಅಥವಾ ಗೊಂದಲಮಯ ಅನುಭವಗಳ ಬಗ್ಗೆ ನಮಗೆ ತಿಳಿಸಿರಿ.

ಈ ಭೀಮ ಪತ್ರಿಕೆಯಲ್ಲಿರುವ ಯಾವುದೇ ವಿಷಯದ ಕುರಿತು ನಿಮಗೆ ಏನಾದರೂ ಪ್ರಶ್ನೆಗಳಿದ್ದರೆ, ಯಾವುದಾದರೂ ಮಾಹಿತಿ ಬೇಕಿದ್ದರೆ ಮತ್ತು ಅನಿಸಿಕೆಗಳಿದ್ದರೆ ನಮ್ಮನ್ನು ಸಂಪರ್ಕಿಸಿ.

8105247409

THE CONCERNED FOR Working Children

FOUR DECADES IN PARTNERSHIP WITH CHILDREN